# ಡಾ. ಮನ್‌ಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ

## 77ನೇ ಗಣರಾಜ್ಯೋತ್ಸವ ಆಚರಣೆ

## "ಸೌಹಾರ್ದತೆ ಮತ್ತು ಮಾನವೀಯತೆ: ಭಾರತೀಯತೆಯ ನೈಜ ರಕ್ಷಕರು"

## Date:26-01-2026



ಡಾ. ಮನ್‌ಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜು ಆವರಣದಲ್ಲಿ 77ನೇ ಗಣರಾಜ್ಯೋತ್ಸವವನ್ನು "ಸೌಹಾರ್ದತೆ ಮತ್ತು ಮಾನವೀಯತೆ ಭಾರತೀಯ ಅಸ್ಮಿತೆಯ ರಕ್ಷಣೆಗೆ ಅತ್ಯವಶ್ಯಕ" ಎಂಬ ವಿಷಯದೊಂದಿಗೆ ಆಚರಿಸಲಾಯಿತು.

ಮುಖ್ಯ ಅತಿಥಿಗಳಾದ ಕರ್ನಾಟಕ ಸರ್ಕಾರದ ಹೆಚ್ಚುವರಿ ಅಡ್ವೋಕೇಟ್ ಜನರಲ್ ಎಸ್. ಎ. ಅಹಮದ್ ಮಾತನಾಡಿ, ಶಿಕ್ಷಣದ ಗುಣಮಟ್ಟ ಹೆಚ್ಚಾಗುತ್ತಿದ್ದರೂ ಮಾನವೀಯ ಮೌಲ್ಯಗಳಲ್ಲಿ ಕುಸಿತ ಕಂಡುಬರುತ್ತಿರುವುದು ಆತಂಕಕಾರಿ ವಿಷಯವೆಂದು ಪ್ರತಿಪಾದಿಸಿದರು.

ಯುವ ಪೀಳಿಗೆಯಲ್ಲಿ ಮಾನವೀಯ ಗುಣಗಳನ್ನು ಬೆಳೆಸುವ ಜವಾಬ್ದಾರಿ ಉನ್ನತ ಶಿಕ್ಷಣ ಸಂಸ್ಥೆಗಳ ಮೇಲಿದೆ ಎಂದು ಅವರು ತಿಳಿಸಿದರು. ಇಂತಹ ಮೌಲ್ಯಗಳು ಭಾರತೀಯ ಸಂವಿಧಾನದಲ್ಲೇ ಅಂತರ್ಗತವಾಗಿವೆ ಎಂದು ಅವರು ವಿಶ್ಲೇಷಿಸಿದರು.

ಸಂವಿಧಾನಾತ್ಮಕ ಹಕ್ಕುಗಳನ್ನು ಅನುಭವಿಸುವ ಜೊತೆಗೆ, ಕರ್ತವ್ಯಗಳನ್ನು ಪ್ರೀತಿಯಿಂದ, ತ್ಯಾಗದಿಂದ ಹಾಗೂ ಸಕ್ರಿಯವಾಗಿ ನಿರ್ವಹಿಸುವುದು ರಾಷ್ಟ್ರ ನಿರ್ಮಾಣಕ್ಕೆ ಅಗತ್ಯವೆಂದು ಅವರು ಒತ್ತಿಹೇಳಿದರು.

ವಿದ್ಯಾರ್ಥಿಗಳಲ್ಲಿ ಸೂಕ್ತ ಭಾಷಾ ಶೈಲಿ ಮತ್ತು ಓದುವ ಅಭ್ಯಾಸವನ್ನು ರೂಪಿಸುವುದು ಹಾಗೂ ವೈಜ್ಞಾನಿಕ ಮನೋಭಾವವನ್ನು ಪೋಷಿಸುವುದರ ಮಹತ್ವವನ್ನು ಅವರು ವಿವರಿಸಿದರು.

ಧ್ವಜಾರೋಹಣ ನೆರವೇರಿಸಿ ಮಾತನಾಡಿದ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ರಮೇಶ್ ಬಿ. ಅವರು ಒಟ್ಟಾರೆ ಶಿಕ್ಷಣ ದಾಖಲಾತಿ ಪ್ರಮಾಣ ಮತ್ತು ಉನ್ನತ ಶಿಕ್ಷಣದಲ್ಲಿರುವ ಕಡಿಮೆ ದಾಖಲಾತಿ ನಡುವಿನ ಅಂತರದ ಬಗ್ಗೆ ಪ್ರಸ್ತಾಪಿಸಿ ವಿಶ್ವವಿದ್ಯಾಲಯಗಳ ಪಾತ್ರವನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದರು.

ರಾಜಶಾಹಿ ವ್ಯವಸ್ಥೆಯಿಂದ ಚುನಾವಣಾ ಪ್ರಕ್ರಿಯೆಗಳ ಮೂಲಕ ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ನಡೆದ ಸಂವಿಧಾನಾತ್ಮಕ ಬದಲಾವಣೆಯನ್ನು ಅವರು ಉಲ್ಲೇಖಿಸಿದರು.

ಸಮಕಾಲೀನ ಶಿಕ್ಷಣ ಹಾಗೂ ಸಾಮಾಜಿಕ ಸವಾಲುಗಳನ್ನು ಪರಿಹರಿಸುವುದು ಜ್ಞಾನಕೇಂದ್ರಗಳಾದ ವಿಶ್ವವಿದ್ಯಾಲಯಗಳ ಬಹುದೊಡ್ಡ ಜವಾಬ್ದಾರಿ ಎಂದು ಅವರು ಒತ್ತಿಹೇಳಿದರು.

ಕುಲಸಚಿವರಾದ ಎ. ನವೀನ್ ಜೋಸೆಫ್ ಅವರು ಸಭೆಯನ್ನು ಸ್ವಾಗತಿಸಿದರು. ಪ್ರಸಾರಾಂಗ ನಿರ್ದೇಶಕ ಡಾ. ತಾಂಡವ ಗೌಡ ಅವರು ವಂದಿಸಿದರು. ಕುಲಸಚಿವ(ಮೌಲ್ಯಮಾಪನ) ಪ್ರೊ.ರಮೇಶ್.ಬಿ. ಕುಡೇನಟ್ಟಿ, ವಿತ್ತಾಧಿಕಾರಿಗಳಾದ ಎಂ.ವಿ.ವಿಜಯಲಕ್ಷ್ಮಿ ಸಮಾರಂಭಲ್ಲಿ ಉಪಸ್ಥಿತರಿದ್ದರು. ಉಪನ್ಯಾಸಕರಾದ ಡಾ..ಮಂಜು ಸಿ. ಎನ್ ಮತ್ತು ಡಾ. ಪ್ರಭು. ಬಿ.ಎಂ. ಸಂವಿಧಾನ ಗೀತೆಯನ್ನು ಪ್ರಸ್ತುತಪಡಿಸಿದರು. ಡಾ. ಸದಾನಂದ ಕಾರ್ಯಕ್ರಮ ನಿರೂಪಿಸಿದರು.

**Dr. Manmohan Singh Bengaluru City University-77th Republic Day Celebration**

**"Fraternity and Humanity: True safeguards of Indianness"**

Republic day was celeberated at Dr Manmohan Singh Bengaluru City University, Central College campus with a focus on the theme-"fraternity and humanity are essential to safeguarding Indian identity".

Prof. Ramesh B., Vice-Chancellor of the University, critically reflected on the role of universities in addressing the gap between overall education enrollment and comparatively low enrollment in higher education.

He analyzed the constitutional evolution from monarchical power to a democratic system through electoral processes and emphasized the responsibility of universities as knowledge centers in resolving contemporary educational and social challenges.

Chief guest of the function S. A. Ahammed, Additional Advocate General, Government of Karnataka, emphasized that despite the rise in educational attainment, there remains a concerning decline in humanitarian values.

He highlighted the responsibility of higher education institutions to inculcate humanitarian ethos among the younger generation, noting that such values are deeply embedded in the Indian Constitution.

He further stressed that nation-building requires love, sacrifice, and active fulfillment of constitutional duties, alongside the enjoyment of constitutional rights.

He also underscored the importance of cultivating appropriate language, reading habit, and nurturing scientific temper among students.

The event concluded with a collective pledge by the Vice-Chancellor and faculty members to collaboratively address these challenges in partnership with affiliated colleges.

Registrar, A.Naveen Joseph welcomed the gathering and Prasaranga Director, Dr. Thandava Gowda, extended vote of thanks. Registrar(Evaluation) Prof.,Ramesh. B. Kudenatti and FinanceOfficer M.V. Vijayalakshmi were also present on the occasion. Faculty members Dr. Manju and Dr. Prabhu.B.M. rendered the Constitution song and the programme was compered by Dr. Sandananda.


ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
DR. MANMOHAN SINGH
BENGALURU CITY UNIVERSITY
BE BOUNDLESS
ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು – 560001
77ನೇ ಗಣರಾಜ್ಯೋತ್ಸವ ದಿನಾಚರಣೆ


ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
DR. MANMOHAN SINGH
BENGALURU CITY UNIVERSITY
BE BOUNDLESS
ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು – 560001
77ನೇ ಗಣರಾಜ್ಯೋತ್ಸವ ದಿನಾಚರಣೆ


ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
DR. MANMOHAN SINGH
BENGALURU CITY UNIVERSITY
BE BOUNDLESS
ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು – 560001
77ನೇ ಗಣರಾಜ್ಯೋತ್ಸವ ದಿನಾಚರಣೆ





ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಆಗು ನೀ ಅನಿಕೇತನ
BE BOUNDLESS
DR. MANMOHAN SINGH
BENGALURU CITY UNIVERSITY
ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು – 560001
77ನೇ ಗಣರಾಜ್ಯೋತ್ಸವ ದಿನಾಚರಣೆ
ದಿನಾಂಕ:26.01.2026, ಸೋಮವಾರ
ಸಮಯ: ಬೆಳಿಗ್ಗೆ 09:00 ಗಂಟೆಗೆ




ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BE BOUNDLESS
DR. MANMOHAN SINGH
BENGALURU CITY UNIVERSITY
ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು – 560001
77ನೇ ಗಣರಾಜ್ಯೋತ್ಸವ ದಿನಾಚರಣೆ
ದಿನಾಂಕ:26.01.2026, ಸೋಮವಾರ
ಸಮಯ: ಬೆಳಿಗ್ಗೆ 09:00 ಗಂಟೆಗೆ